**FINAL REPORT OF THE WORK DONE ON THE MINOR RESEARCH PROJECT**

TITLE OF RESEARCH PROJECT:

# "Alivina Anchina Thamboori Kaavyagalu"

UGC approval Letter No.:
MRP(H)0247/12-13/KAMY029/UGC-SWRO
Dated 29.03.2013

By

**Dr.H.L.Malleshagowda**
Associate Professor
Department of Kannada
A.V.K. College for Women,
Hassan – 573201
Karnataka

**Annexure - VI**

**UNIVERSITY GRANTS COMMISSION**
**BAHADUR SHAH ZAFAR MARG**
**NEW DELHI – 110 002.**

**Annual/Final Report of the work done on the Minor Research Project.**
**(Report to be submitted within 6 weeks after completion of each year)**

1. Project report No. 1st/Final : Final Report.

2. UGC Reference No.F. SWRO : MRP(H)0247/12-13/KAMY029/UGC dated 29.03.2013

3. Period of report : from 29.3.13 till date

4. Title of research project : **"Alivina Anchina Thamboori Kaavyagalu"**

5(a) Name of the Principal Investigator : **Dr.H.L Malleshagowda**

(b) Dept. : Kannada

(c) College where work has progressed: A.V.K. College for Women, Hassan, Karnataka.

6. Effective date of starting of the project: 23.09.13

7. Grant approved and expenditure incurred during the period of the report:

a. Total amount approved: Rs.60,000=00 (Sixty thousand only)

b. Total expenditure: Rs.35,000=00 (Rupees Thirty five thousand only)

c. Report of the work done: (Please attach a separate sheet)

(i) Brief objective of the project : Enclosed a separate sheet.

(ii) Work done so far and results achieved and publications, if any, resulting from the work (Give details of the papers and names of the journals in which it has been published or accepted for publication).

(iii) Has the progress been according to original plan of work and towards achieving the objective? If not, state reasons

Yes. The progress has been according to the original plan of the work.

(iv) Please enclose a summary of the findings of the study. One bound copy of the

Final report of work done may also be sent to the concerned Regional Office of the

UGC: Enclosed

(v) Any other information : No

SIGNATURE OF PRINCIPAL INVESTIGATOR

PRINCIPAL

# Brief objective of the Project

ತಂಬೂರಿಯವರು ಒಂದು ಅಧ್ಯಯನ ಎಂಬ ಶೀರ್ಷಿಕೆಯಡಿಯಲ್ಲಿ ಪ್ರಸ್ತುತ ಲೇಖಕರು ಈಗಾಗಲೇ ಸಂಶೋಧನೆ ಕೈಗೊಂಡು ಅವರ ಬದುಕು ಮತ್ತು ಕಾವ್ಯಗಳನ್ನು ಇಡಿಯಾಗಿ ಪರಿಶೀಲನೆಗೆ ಒಳಪಡಿಸಲಾಗಿದೆ. ಈ ಸಂಶೋಧನೆಯ ಸಂದರ್ಭದಲ್ಲಿ ಕಂಡುಬಂದ ಸಂಗತಿಯನ್ನು ಆಧರಿಸಿ ಈ ಯೋಜನೆಯನ್ನು ಕೈಗೆತ್ತಿಕೊಳ್ಳಲಾಗಿದೆ. ಪ್ರಸ್ತುತ ಲಭ್ಯವಿರುವ ಈ ಪ್ರಕಾರದ ಗಾಯಕರು ಕೊನೆಯ ತಲೆಮಾರಿನ ಗಾಯಕರಾಗಿದ್ದಾರೆ ಎಂಬ ಪ್ರಮುಖ ಅಂಶವೇ ಈ ಕಿರು ಸಂಶೋಧನೆಗೆ ಪ್ರೇರಕವಾಗಿದೆ. ಆ ಹಿನ್ನೆಲೆಯಲ್ಲಿ ಈ ಸಂಶೋಧನೆ ಆರಂಭವಾಗಿದೆ. ಅದಕ್ಕೆ ಪೂರಕವಾಗಿ ಈ ತಂಬೂರಿ ಗಾಯಕರ ಕುರಿತಾದ ಮಾಹಿತಿಯನ್ನು ಇಲ್ಲಿ ನೀಡಲಾಗಿದೆ.

ಕನ್ನಡದಲ್ಲಿ ವೃತ್ತಿಗಾಯಕರಅಧ್ಯಯನ

ಕನ್ನಡದಲ್ಲಿ 'ವೃತ್ತಿಗಾಯಕ' ಎಂಬ ಪರಿಕಲ್ಪನೆ ಮೊದಲಿನಿಂದಇರಲಿಲ್ಲ. ಇವರನ್ನು 1976ಕ್ಕೂ ಮೊದಲು 'ಕಥೋಪಜೀವಿಗಳು' ಎಂದುಕರೆಯುತ್ತಿದ್ದರು.ಈ ಕಥೋಪಜೀವಿಗಳ ವಿವರ ಹತ್ತೊಂಬತ್ತನೆಯ ಶತಮಾನದ ಮಧ್ಯಭಾಗದಲ್ಲಿಯೇದೊರೆಯುತ್ತದೆ. 1981ರಲ್ಲಿ ರೋವರ್ ಎಂಬ ವಿದ್ವಾಂಸರು ಪ್ರಕಟಿಸಿದ 'THE FOLK SONGS OF SOUTHERN INDIA' ಎಂಬ ಕೃತಿಯಲ್ಲಿಕನ್ನಡದ ಈ ಬಗೆಯ ಗಾಯಕರೆನಿಸಿಕೊಂಡವರಲ್ಲಿ 'ದಾಸ' ರೆಂಬ ಗಾಯಕರನ್ನು ಹೆಸರಿಸಿ ವಿವರಿಸಿದ್ದಾರೆ. ಇಪ್ಪತ್ತನೆಯ ಶತಮಾನದಎರಡನೆಯದಶಕದಲ್ಲಿ ಮಾಸ್ತಿ ವೆಂಕಟೇಶಐಯಂಗಾರರು ಪ್ರಕಟಿಸಿದ 'ಕನ್ನಡ ನಾಡಿನ ಲಾವಣಿ ಸಾಂಗತ್ಯ' ಎಂಬ ಲೇಖನದಲ್ಲಿ ಅನೇಕ ಈ ಬಗೆಯಗಾಯಕರ ಸುಳಿವು ದೊರೆಯುತ್ತದೆ.1930ರಿಂದೀಚೆಗೆ ಕನ್ನಡಜನಪದ ಸಾಹಿತ್ಯ ಸಣಗ್ರಹದ ಪ್ರಮಾಣ ಸಮೃದ್ಧವಾಗಿ ನಡೆದಿದೆಯಾದರೂಯಾರೂ ಈ ಬಗೆಯಗಾಯಕರ ಮತ್ತುಅವರ ಸಾಹಿತ್ಯದಕ್ರಮಬದ್ಧವಾದಅಥವಾ ಶಾಸ್ತ್ರೀಯವಾದ ಅಧ್ಯಯನ ನಡೆದಿರಲಿಲ್ಲ ಎಂದೇ ಹೇಳಬೇಕು.

ಸಿಂಪಿ ಲಿಂಗಣ್ಣ ಮತ್ತು ಪಿ.ಮಾಲಾಅವರು ಪ್ರಕಟಿಸಿದ 1933ರ 'ಜೀವನ ಸಂಗೀತ' ಕೃತಿಯ ಈ ವಿಚಾರದಲ್ಲಿನ ಮೊದಲ ಕೃತಿಯಾಗುತ್ತದೆ.ಇವರು ಲಾವಣಿ ಸಂಗ್ರಹ ಮಾಡಿಅದರಲ್ಲಿ 'ಕಲ್ಗಿತುರಾ' ಎಂಬ ಸಂಪ್ರದಾಯವನ್ನುಕ್ರಮಬದ್ಧವಾಗಿ ಪರಿಚಯಿಸಿದ್ದಾರೆ.ಇನ್ನೂ ಉಳಿದಂತೆ ದೇವುಡು ನರಸಿಂಹಶಾಸ್ತ್ರಿಗಳು ಲಾವಣಿಗಳನ್ನು ಗುರುತಿಸಿ ಉಪಕೃತರಾಗಿದ್ದಾರೆ. ಹಾಗೆಯೇ ಸ್ವಾತಂತ್ರ್ಯೋತ್ತರ ದಿನಗಳಲ್ಲಿ ಮತಿಘಟ್ಟ ಕೃಷ್ಣಮೂರ್ತಿಗಳು, ಗದ್ದಿಗೀಮಠದೊಡ್ಡಬಾವಪ್ಪಮೂಗಿ, ಮಿರ್ಜಿಅಣ್ಣರಾಯ, ಎಲ್.ಆರ್.ಹೆಗಡೆ, ಬಿ.ವಿ.ಮಹಿಷವಾಡಿ, ಕ.ರಾ.ಕೃ ಮುಂತಾದವರನ್ನು ಹೆಸರಿಸಿ ಸ್ಮರಿಸಬೇಕಾಗುತ್ತದೆ.ಇವರ ಸಂಗ್ರಹಕಾರ್ಯದ ವಿವರವನ್ನುಜೀ.ಶಂ.ಪ ಅವರುತಮ್ಮ ಸಂಶೋಧನಾಕೃತಿಯಲ್ಲಿ ಸಂಕ್ಷಿಪ್ತವಾಗಿ ನೀಡಿದ್ದಾರೆ. ಆದರೆ ಮೇಲಿನ ಯಾವ ವಿದ್ವಾಂಸರೂತಾವು ಸಂಗ್ರಹಿಸಿದ ಕಾವ್ಯ ಪ್ರಕಾರದ ಶಾಸ್ತ್ರೀಯ ಅಧ್ಯಯನಅಥವಾ ಸಮಗ್ರ ಸಂಗ್ರಹಕಾರ್ಯವನ್ನು ಮಾಡಲಾಗಲಿಲ್ಲ ಎಂದೂ ಹೇಳುತ್ತಾರೆ.

1952ರಲ್ಲಿ ಜೀ.ಶಂ.ಪರಮಶಿವಯ್ಯ ಅವರು ಮಾದೇಶ್ವರ ಸಂಪ್ರದಾಯದಕಾವ್ಯವನ್ನು ಗುರುತಿಸಿ ಈ ಗಾಯನ ಪರಂಪರೆಯ ಶಾಸ್ತ್ರೀಯ ಅಧ್ಯಯನಕ್ಕೆ ನಾಂದಿ ಹಾಡಿದರುಎಂದು ಹೇಳಬೇಕು. ಸದರಿ ವಿದ್ವಾಂಸರುಕೂಡ 1967 ರಲ್ಲಿಯೂಇವರನ್ನು ಕಥೋಪಜೀವಿಗಳು ಎಂದೇಕರೆಯುತ್ತಿದ್ದರು. ಹಾಡುವುದನ್ನುಒಂದು ಕಸುಬನ್ನಾಗಿ ಮಾಡಿಕೊಂಡು, ಆ ಕಲೆಯಲ್ಲಿ ಸಿದ್ಧಹಸ್ತರಾದ ಹಲವು ಪರಂಪರೆಯಗಾಯಕರು ಆ ನಂತರದಲ್ಲಿ ಇವರ ಅಧ್ಯಯನದ ಮೂಲಕ ಹೊರಬಂದಿದ್ದಾರೆ. ಜಿ.ಶಂ.ಪರಮಶಿವಯ್ಯನರ ಸಮಕಾಲೀನರೇ ಆಗಿದ್ದ ಪಿ.ಆರ್.ತಿಪ್ಪೇಸ್ವಾಮಿ ಅವರು ಮೈಸೂರು ಪ್ರಾಂತ್ಯದ ವೃತ್ತಿಗಾಯಕ ಸಂಪ್ರದಾಯದ ಅನೇಕ ಪರಂಪರೆಗಳನ್ನು ಗುರುತಿಸಲು ನೆರವಾಗಿದ್ದಾರೆ. ಇವರುಗಳು 1960–70ರ ದಶಕದಲ್ಲಿ ಕಂಸಾಳೆ ನೀಲಗಾರರು ಮತ್ತು ಮಂಟೇಸ್ವಾಮಿ ಸಂಪ್ರದಾಯದ ಕಲಾಪ್ರಕಾರಗಳು ಮತ್ತುಕಲಾವಿದರನ್ನುಕಂಡುಕಾವ್ಯ ಸಂಗ್ರಹಿಸಿಕೊಂಡು ಈ ಪರಂಪರೆಯ ಸಾಹಿತ್ಯ ಶ್ರೀಮಂತಿಕೆಗೆ ಬೆರಗಾಗಿದ್ದಾರೆ.

1976ರಲ್ಲಿ ಮೈಸೂರು ವಿಶ್ವವಿದ್ಯಾನಿಲಯದ ಪ್ರಸಾರಾಂಗದವರು ಪ್ರಕಟಿಸಿದ ಜೀ.ಶಂ.ಪರಮಶಿವಯ್ಯ ಅವರ ಸಂಶೋಧನಾಕೃತಿ “ದಕ್ಷಿಣಕರ್ನಾಟಕಜನಪದಕಾವ್ಯ ಪ್ರಕಾರಗಳು” ಈ ವೃತ್ತಿಗಾಯಕ ಪರಿಕಲ್ಪನೆಯ ಮತ್ತು ಪ್ರಕಾರಗಳ ಶಾಸ್ತ್ರೀಯ ಅಧ್ಯಯನದ ಮೈಲಿಗಲ್ಲು. ದಕ್ಷಿಣಕರ್ನಾಟಕ ಪ್ರಾಂತ್ಯದಲ್ಲಿ ಸಮೃದ್ಧವಾಗಿದ್ದ ಈ ಬಗೆಯಅಧ್ಯಯನಕ್ಕೆ ಸದರಿಕೃತಿಯುಒಂದುಅಧಿಕೃತದಾಖಲೆಎನ್ನುವಷ್ಟರ ಮಟ್ಟಿನ ಮಾಹಿತಿಗಳನ್ನೊಳಗೊಂಡಿದೆ. ಮುಂದಿನ ತಲೆಮಾರಿನ ಅನೇಕ ಯುವ ವಿದ್ವಾಂಸರು ಈ ಕೃತಿಯಿಂದ ಪ್ರೇರಿತರಾಗಿ ಅನೇಕ ಪ್ರತ್ಯೇಕ ಪರಂಪರೆಗಳ ಅಧ್ಯಯನಕೈಗೊಂಡಿದ್ದಾರೆ. ಈ ಕೃತಿಯಲ್ಲಿ ಜೀ.ಶಂ.ಪರಮಶಿವಯ್ಯ ಅವರು ಕಂಸಾಳೆಯವರು, ನೀಲಗಾರರು, ಚೌಡಿಕೆಯವರು, ಗಣೆಯವರು, ಗೊರವರು, ಗೊಂದಲಿಗರು, ದೊಂಬಿದಾಸರು, ತೆಲುಗುಜಂಗಮರು, ಹೆಳವರು, ಕಿನ್ನರಜೋಗಿಗಳು, ತಂಬೂರಿಯವರು, ಕರಪಾಲದವರು, ಡೊಳ್ಳಿನವರು, ಭಾಗವತಿಕೆಯವರು, ವೀರಗಾಸೆಯವರು, ಅಂಟಿಕೆ–ಪಂಟಿಕೆಯವರು. . . . ಇತ್ಯಾದಿ ಕಲಾಪ್ರಕಾರಗಳನ್ನು ಪರಿಚಯಿಸಿದ್ದಾರೆ.ಇವರತರುವಾಯ ಕ್ಯಾತನಹಳ್ಳಿ ರಾಮಣ್ಣಅವರು ಭೂತಾರರ ಮೇಳ, ಬಸವರಾಜ ನೆಲ್ಲರಸಅವರು ಅಸಾದಿ ಮೇಳ, ವೀರೇಶ ಬಡಿಗೇರಅವರು ಗೀಗೀ ಮೇಳ ಮತ್ತು ಭಜನ ಮೇಳಗಳ ಕುರಿತಾಗಿ ವಿವರವಾದಅಧ್ಯಯನ ನಡೆದಿ ಈ ಪಟ್ಟಿಯನ್ನು ವಿಸ್ತರಿಸಿದ್ದಾರೆ.ಇತ್ತೀಚೆಗೆಜೀ.ಶಂ.ಪರಮಶಿವಯ್ಯ ಅವರು ಪರಿಚಯಿಸಿದ ಕಲೆಗಳನ್ನು ಪ್ರತ್ಯೇಕವಾಗಿ ಮತ್ತು ಆಳವಾಗಿ ಅಧ್ಯಯನ ಮಾಡುವ ಪರಂಪರೆ ಪ್ರಾರಂಭವಾಗಿದೆ. ಪ್ರಸ್ತುತಅಧ್ಯಯನ ಅಂತಹವುಗಳಲ್ಲಿ ಒಂದು.

1977ರಲ್ಲಿ ಕನ್ನಡ ಸಾಹಿತ್ಯ ಪರಿಷತ್ತಿನ ವತಿಯಿಂದಗೋ.ರು.ಚನ್ನಬಸಪ್ಪಅವರ ನೇತೃತ್ವದಲ್ಲಿ ಸುಮಾರು ಮೂವತ್ತೆರಡುಜನಉತ್ಸಾಹಿ ಯುವ ವಿದ್ವಾಂಸರು ನಾಡಿನಾದ್ಯಂತಕ್ಷೇತ್ರಕಾರ್ಯ ನಡೆಸಿ ಸುಮಾರುಒಂದುನೂರ ನಲವತ್ತೈದು ಕಲಾಪ್ರಕಾರಗಳನ್ನು ಗುರುತಿಸಿ ಪರಿಚಯಿಸಿದ್ದಾರೆ.ಈ ಕೃತಿಯಲ್ಲಿ ವೃತ್ತಿಗಾಯಕ ಪರಂಪರೆಯ ಹದಿನಾರು ಕಲೆಗಳು ಪರಿಚಯಗೊಂಡಿವೆ.

1981ರಲ್ಲಿ ಕನ್ನಡ ಸಾಹಿತ್ಯ ಪರಿಷತ್ತು ಪ್ರಕಟಿಸಿದ "ಕನ್ನಡ ವೃತ್ತಿಗಾಯಕ ಕಾವ್ಯಗಳು" ಎಂಬ ಬೃಹತ್ ಸಂಪುಟದ ಸಂಪಾದಕರಾದಜೀ.ಶಂ.ಪರಮಶಿವಯ್ಯ ಅವರುತಮ್ಮಅರಿಕೆ ನುಡಿಯಲ್ಲಿ–ಒಟ್ಟಿನಲ್ಲಿಆವರೆಗೆ ಗುರುತಿಸಿದ– ವೃತ್ತಿಗಾಯಕ ಸಂಪ್ರದಾಯಗಳನ್ನು ಪಟ್ಟಿಮಾಡಿದ್ದಾರೆ.

<u>ಧಾರ್ಮಿಕ</u>

1. ದೇವರಗುಡ್ಡರ ಸಂಪ್ರದಾಯ (ಕಂಸಾಳೆ ಮೇಳ)
2. ನೀಲಗಾರರ ಸಂಪ್ರದಾಯ (ನೀಲಗಾರರ ಮೇಳ)
3. ಚೌಡಿಕೆ ಸಂಪ್ರದಾಯ (ಚೌಡಿಕೆ ಮೇಳ)
4. ಗೊರವರ ಸಂಪ್ರದಾಯ (ಗೊರವರ ಮೇಳ)
5. ಗೊಂದಲಿಗ ಸಂಪ್ರದಾಯ (ಗೊಂದಲಿಗರ ಮೇಳ)
6. ಗಣಿಯವರ ಸಂಒಪ್ರದಾಯ (ಗಣಿಯವರ ಮೇಳ)
7. ವಾಘೇಮುರುಳಿ ಸಂಪ್ರದಾಯ (ವಾಘೇಮುರುಳಿ ಮೇಳ)

<u>ಲೌಕಿಕ</u>

8. ದೊಂಬಿದಾಸರು (ದೊಂಬಿದಾಸರ ಮೇಳ)
9. ಹೆಳವರು (ಹೆಳವರ ಮೇಳ)
10. ಕಿನ್ನರಿಜೋಗಿಗಳು (ಕಿನ್ನರಿಜೋಗಿ ಮೇಳ)
11. ತೆಲುಗುಜಂಗಮರು (ತೆಲುಗುಜಂಗಮರ ಮೇಳ)
12. ತಂಬೂರಿಯವರು (ತಂಬೂರಿ ಮೇಳ)
13. ಚೌಡಿಕೆಯವರು (ಚೌಡಿಕೆ ಮೇಳ)
14. ಕರಪಾಲದವರು (ಕರಪಾಲ ಮೇಳ)
15. ಸಾರಿಂದ ಸಂಪ್ರದಾಯ (ಸಾರಿಂದ ಮೇಳ)
16. ಸ್ತ್ರೀ ಸಂಪ್ರದಾಯ (ಹೆಂಗಸರ ಮೇಳ)
17. ದೇವ ಸೋಲಿಗರು (ದೇವಸೋಲಿಗರ ಮೇಳ)
18. ಜಂಗಮರು (ಜಂಗಮರ ಮೇಳ)
19. ಲಂಬಾಣಿಗರು (ಲಂಬಾಣಿ ಪುರುಷ ಮೇಳ) <u>ಅರೆ ವೃತ್ತಿಗಾಯಕರು</u>
20. ಕಲ್ಗಿತುರಾ ಸಂಪ್ರದಾಯ
21. ಭಾಗವತಿಕೆ ಮೇಳ
22. ವೀರಗಾಸೆ ಮೇಳ
23. ಡೊಳ್ಳು ಮೇಳ

ಜೊತೆಗೆ ಅಸಾದಿ ಮೇಳ ಮತ್ತು ಭೂತೇರರ ಮೇಳಗಳನ್ನು ಹೆಸರಿಸಿದ್ದಾರೆ. ಒಟ್ಟುಇಪ್ಪತ್ತೈದು ವೃತ್ತಿಗಾಯಕ ಪರಂಪರೆಗಳನ್ನು ಲೌಕಿಕ, ಧಾರ್ಮಿಕ ಮತ್ತುಅರೆವೃತ್ತಿಗಾಯಕ ಎಂಬ ವರ್ಗೀಕರಣದಡಿಯಲ್ಲಿ ಹೆಸರಿಸಿದ ಹಾಗಾಗುತ್ತದೆ.ಅರೆವೃತ್ತಿಗಾಯಕರನ್ನು ಹೊರತುಪಡಿಸಿಯೂ ವೃತ್ತಿಗಾಯಕರೇಇಪ್ಪತ್ತಕ್ಕೂ ಹೆಚ್ಚು ಸಂಖ್ಯೆಯಲ್ಲಿಗೋಚರಿಸುತ್ತಾರೆ.

1996ರಲ್ಲಿ ಕನ್ನಡ ವಿಶ್ವವಿದ್ಯಾನಿಲಯದ ಪ್ರಸಾರಾಂಗ ಪ್ರಕಟಿಸಿದ ಹಿ.ಚಿ. ಬೋರಲಿಂಗಯ್ಯನವರ ಸಂಪಾದಕತ್ವದ "ಕರ್ನಾಟಕಜನಪದ ಕಲೆಗಳ ಕೋಶ" ಎಂಬ ಕೃತಿಯು ಈ ಕ್ಷೇತ್ರದಇತ್ತೀಚಿನಕೃತಿ.ಸದರಿಕೃತಿರಚನೆಗೆ ಮೊದಲುಜಿಲ್ಲಾವಾರು ಮೂವತ್ತೊಂದು ಸ್ಥಳೀಯ ವಿದ್ವಾಂಸರನ್ನುಆಯ್ಕೆ ಮಾಡಿಅವರಿಗೆಕ್ಷೇತ್ರಕಾರ್ಯತರಬೇತಿ ನೀಡಿ ವ್ಯವಸ್ಥಿತ ರೀತಿಯಲ್ಲಿ ಮಾಹಿತಿ ಸಂಗ್ರಹಿಸಿ ಈ ಕೋಶವನ್ನು ಹೊರತಂದಿದ್ದಾರೆ.ಪ್ರಕಟಣೆಗೆ ಮೊದಲುಉನ್ನತ ಸಮಿತಿಯುಇದನ್ನು ಪರಿಶೀಲಿಸಿದೆ.ಸದರಿಕೃತಿಯಲ್ಲಿಕರ್ನಾಟಕದ ಸುಮಾರು ನೂರಅರವತ್ತು ಬಗೆಯ ಕಲೆಗಳನ್ನು ಕಲೆಹಾಕಿ ವಿವಿಧ ಶಿರ್ಷಿಕೆಗಳ ಅಡಿ ಪರಿಚಯಿಸಿದ್ದಾರೆ.ಈ ಕೃತಿಯ ಪ್ರಸ್ತಾವನೆಯ ಮಾತುಗಳಲ್ಲಿ ಹಿ.ಚಿ.ಬೋರಲಿಂಗಯ್ಯನವರು "ಕರ್ನಾಟಕ ಜಾನಪದ ಅಧ್ಯಯನದಲ್ಲಿ ಇದುವರೆಗೆ ತಮಗೆ ತೋಚಿದ ರೀತಿಯಲ್ಲಿ ಕಲೆಗಳ ವಿಂಗಡಣೆ ಮಾಡಿಕೊಂಡಂತೆ ಕಾಣುತ್ತದೆ. ಬಹುತೇಕವಾಗಿ ಧಾರ್ಮಿಕ ಕಲೆ, ಲೌಕಿಕ ಕಲೆ, ಮನರಂಜನಾ ಕಲೆ, ಅಲೆಮಾರಿ ಕಲೆ ಹಾಗೂ ರಂಗಭೂಮಿ ಕಲೆಗಳು ಎಂಬಂತೆ ಸರ್ವೇಸಾಧಾರಣವಾಗಿ ವಿಭಾಗ ಕ್ರಮ ಚಾಲ್ತಿಯಲ್ಲಿದ್ದಂತೆ ಕಾಣುತ್ತದೆ. ಬಹುತೇಕ ವಿದ್ವಾಂಸರು ಕಲೆಗಳನ್ನು ಮುಖ್ಯವಾಗಿ ಧಾರ್ಮಿಕ ಮತ್ತು ಲೌಕಿಕ ಎಂದು ವಿಂಗಡಿಸುತ್ತಾರೆ. ಅವರ ದೃಷ್ಟಿಯಲ್ಲಿ ಧಾರ್ಮಿಕವೆಂದರೆ ಆರಾಧನಾ ಕಲೆಗಳು, ಲೌಕಿಕವೆಂದರೆ ವೃತ್ತಿಗಾಯಕ ಕಲೆಗಳು. ಈ ವೃತ್ತಿಗಾಯಕರಲ್ಲೇ ಜೀ.ಶಂ.ಪರಮಶಿವಯ್ಯ ಅವರು ಧಾರ್ಮಿಕ ಮತ್ತು ಲೌಕಿಕ ಎಂದು ವಿಂಗಡಿಸಿದ್ದಾರೆ. ಆದರೆ ಈ ವಿಂಗಡಣೆ ಅಷ್ಟು ಸಮಂಜಸವಲ್ಲ(ಪುಟ–8) ಎಂದು ಅಭಿಪ್ರಾಯ ಪಡುತ್ತಾರೆ. ಜೊತೆಗೆ "ಧರ್ಮ–ದೇವರು ಆರಾಧನೆ, ಪಂಥ, ಪಂಗಡ ಹಾಗೂ ಸಾಮಾಜಿಕ ಶ್ರೇಣೀಕರಣಗಳ ಸಂಕೀರ್ಣ ಬದುಕು ಹೇಗೆ ಈ ಕಲಾ ಜಗತ್ತಿನ ಮೇಲೆ ಪ್ರಭಾವ ಬೀರಿತು ಮತ್ತು ಆ ಮೂಲಕ ಜನಪದ ಕಲೆಗಳು ಕಂಡುಕೊಂಡ ಸ್ಥಾನಗಳೇನು ಎಂಬ ವಿಚಾರಗಳು ಕರ್ನಾಟಕದ ಮಟ್ಟಿಗಂತೂ ವಿಸ್ಮಯಕಾರಿ. ಮನುಷ್ಯನ ಸಾಂಸ್ಕೃತಿಕ ಚರಿತ್ರೆಗೂ ಜನಪದ ಕಲೆಗಳ ಉಗಮಕ್ಕೂ ಅವಿನಾಭಾವ ಸಂಬಂಧವಿದೆ. ಈ ಮಾತನ್ನು ಗಮನದಲ್ಲಿಟ್ಟುಕೊಂಡೇ ನಮ್ಮ ಜನಪದ ಕಲೆಗಳನ್ನು ಅಧ್ಯಯನ ಮಾಡಬೇಕಾಗುತ್ತದೆ" ಎಂದು ಹೊಸ ಪರಂಪರೆಯ ಅನಿವಾರ್ಯತೆಯನ್ನು ಹೇಳುತ್ತಾರೆ, ಯಾವುದೇ ಕಲೆಯ ಅಧ್ಯಯನ ಸಮಗ್ರ ಅನಿಸಿಕೊಳ್ಳುವುದು ಈ ಕ್ರಮದಿಂದಲೇ ಎಂಬುದು ವಿವಾದಾತೀತ. ಆದರೆ ಕಲೆಗಳ ವರ್ಗೀಕರಣದ ವಿಚಾರದಲ್ಲಿ ಧಾರ್ಮಿಕ ಲೌಕಿಕ ಎಂಬ ವರ್ಗೀಕರಣವನ್ನು ಅಲ್ಲಗಳೆದಿರುವ ಬೋರಲಿಂಗಯ್ಯ ಅವರು ಅದೇ ಕ್ರಮವನ್ನು ಪರೋಕ್ಷವಾಗಿ ಹೋಲುವ "ಆರಾಧನ ಕಲೆಗಳು ಎಂಬ ಪ್ರಮುಖ ಭಾಗದಲ್ಲಿ ಮಾರಿ, ಭೂತ, ನಾಗ, ವೀರಭದ್ರ, ಯಲ್ಲಮ್ಮ, ಮಾರೇಶ್ವರ, ಮಂಟೇಸ್ವಾಮಿ, ಮೈಲಾರಲಿಂಗ ಮುಂತಾದವುಗಳಂತೆ ದೈವಗಳ ಆರಾಧನಾ ಕ್ರಮದಲ್ಲಿ ಬರುವ ಕಲೆಗಳನ್ನು ವಿಭಾಗಿಸಲಾಗಿದೆ" ಎನ್ನುತ್ತಾರೆ. ಇವರು ಗುರುತಿಸುವ ಬಗೆಯಲ್ಲಿಯೂ ಹಿಂದಿನ ವಿದ್ವಾಂಸರು ಹೇಳುವಂತೆಯೇ ಧಾರ್ಮಿಕದ ಎಲ್ಲ ಸಂಪ್ರದಾಯಗಳು ಆರಾಧನೆಯ ಅಡಿಯಲ್ಲೆ ಬರುತ್ತವೆ. ಧಾರ್ಮಿಕ

ವೃತ್ತಿಗಾಯಕ ಸಂಪ್ರದಾಯಗಳನ್ನು ದೃಷ್ಟಿಯಲ್ಲಿಟ್ಟುಕೊಂಡು ನೋಡಿದರೆ ಭೂತೇರರು, ಕಂಸಾಳೆಯವರು, ನೀಲಗಾರರು ಚೌಡಿಕೆಯವರು ಮುಂತಾದ ಪ್ರಮುಖ ಧಾರ್ಮಿಕ ವೃತ್ತಿಗಾಯಕರು ಈ ಆರಾಧನೆಯ ಪರಂಪರೆಯಲ್ಲಿ ಬರುತ್ತಾರೆ. ಈ ಅಂಶವನ್ನು ಗಮನಿಸಿದಾಗ ಆರಾಧನೆ, ಸಮೃದ್ಧಿ ಹಾಗೂ ಫಲವಂತಿಕೆ, ವಿಶೇಷ ಜನವರ್ಗಗಳ ಮತ್ತು ಬುಡಕಟ್ಟುಗಳ ಕಲೆಗಳು, ಸಂಕೀರ್ಣ ಕಲೆಗಳು, ಜನಪದ ರಂಗಭೂಮಿ ಕಲೆಗಳು ಎಂಬ ಹೊಸ ಪರಿಕಲ್ಪನೆ ಅಧ್ಯಯನದ ಮತ್ತೊಂದು ಆಯಾಮವಾಗಬಲ್ಲದೇ ಹೊರತು ಕಲೆಗಳ ವಿಂಗಡಣಾ ಹೊಸ ಕ್ರಮವಾಗಲಾರದು. ಜೊತೆಗೆ ವೃತ್ತಿಗಾಯಕ ಪರಂಪರೆಯನ್ನು ಧಾರ್ಮಿಕ ಮತ್ತು ಲೌಕಿಕ ಎಂದು ವಿಂಗಡಿಸಿಕೊಳ್ಳುವುದು ಪ್ರಾಥಮಿಕ ಅಧ್ಯಯನದ ಹಂತವಷ್ಟೇ. ಅಧ್ಯಯನ ಗಂಭೀರವಾದಷ್ಟು ಕಲೆಗಳ ಸ್ವರೂಪ ಸಂಕೀರ್ಣಗೊಳ್ಳುತ್ತದೆ ಅಥವಾ ಇತ್ತೀಚಿನ ಹೊಸ ಸಾಮಾಜಿಕ ಸಂದರ್ಭಗಳು ಹಿಂದಿನ ಕಲೆಗಳನ್ನು ಪ್ರಾಚೀನ ಸ್ವರೂಪದಲ್ಲಿ ಉಳಿಯಲು ಬಿಟ್ಟಿಲ್ಲ, ಹಾಗೂ ಧಾರ್ಮಿಕ ಮತ್ತು ಲೌಕಿಕ ಎಂಬುದು ಕಲೆಯ ಮೂಲಸ್ಥಿತಿ ಅಷ್ಟೆ. ಪ್ರಸ್ತುತ ಅದರ ಸ್ವರೂಪವನ್ನು ಒಂದೊಂದೇ ಕಲೆಯ ಸಂದರ್ಭದಲ್ಲಿ ವಿಶ್ಲೇಷಿಸುವುದು ಸೂಕ್ತ. ಆದ್ದರಿಂದ ಪ್ರಸ್ತುತ ಅಧ್ಯಯನದ ಸಂದರ್ಭದಲ್ಲಿ ಈ ಹಿಂದೆ ಗುರುತಿಸಿಕೊಂಡಿರುವ ಗಾಯನ ಪರಂಪರೆಗೆ ಮತ್ತು ಕೆಲವನ್ನು ಸೇರಿಸಿ ಗಾಯನ ಕಲೆಗಳನ್ನು ಈ ಕೆಳಕಂಡಂತೆ ಪಟ್ಟಿ ಮಾಡಬಹುದು.

1. ಕಂಸಾಳೆ ಮೇಳದವರು
2. ನೀಲಗಾರರ ಮೇಳ ಅಥವಾ ಮಂಟೇಸ್ವಾಮಿ ಮೇಳದವರು
3. ಚೌಡಿಕೆ ಮೇಳದವರು
4. ಗೊರವ ಮೇಳದವರು
5. ಗೊಂದಲಿಗ ಮೇಳದವರು
6. ಗಣೆ ಮೇಳದವರು
7. ಅಸಾದಿ ಮೇಳದವರು
8. ವಾಘೇ ಮುರುಳಿ ಮೇಳದವರು
9. ಏಕತಾರಿಯವರು
10. ದೊಂಬಿದಾಸರು
11. ಗೊಂಬೆ ಮೇಳದವರು
12. ಹೆಳವರು
13. ಕಿನ್ನರಿ ಮೇಳದವರು
14. ತೆಲುಗು ಜಂಗಮರು
15. ತಂಬೂರಿಯವರು
16. ಕರಪಾಲದವರು
17. ಲಂಬಾಣಿ ಮೇಳದವರು

18. ಸ್ತ್ರೀ ಸಂಪ್ರದಾಯದವರು
19. ಸಾರಿಂದ ಮೇಳದವರು
20. ಡೊಳ್ಳು ಮೇಳದವರು
21. ವೀರಗಾಸೆ ಮೇಳದವರು
22. ಭಾಗವಂತಿಕೆ ಮೇಳದವರು
23. ಗೀಗೀ ಮೇಳದವರು
24. ಭಜನೆ ಮೇಳದವರು
25. ದೇವಸೋಲಿಗರು
26. ಜಂಗಮರು

ಈ ಮೇಲಿನ ಕಲೆಗಳ ಹೆಸರುಗಳಲ್ಲಿ ಕೆಲವು ಜಾತಿ ಮೂಲದಿಂದ ಕಲೆಗೆ ಮತ್ತೆ ಕೆಲವು ಕಲೆಯ ಮೂಲದಿಂದ ಜಾತಿಗೆ ಬಂದಿರುವುದುಂಟು. ಪ್ರಧಾನ ವಾದ್ಯದ ಹೆಸರು ಕೆಲವು ಕಲೆಗಳಿಗೆ ಬಂದಿದ್ದರೆ ಉಳಿದಂತೆ ಈ ಜಾತಿ ವಾದ್ಯ ಯಾವುದಕ್ಕೂ ಸಂಬಂಧ ಪಡದೆ ಸ್ವತಂತ್ರವಾದ ಕೆಲವು ಹೆಸರುಗಳಿವೆ.

ತಂಬೂರಿಯವರನ್ನು ಸಾಮಾನ್ಯವಾಗಿ ಈ ಮೇಲಿನ ಗಾಯಕರೊಂದಿಗೆ ಮೊದಲಿನಿಂದಲೂ ಹೆಸರಿಸುತ್ತಾ ಬಂದಿರುವುದರಿಂದ ಮತ್ತು ತಂಬೂರಿ ಗಾಯಕರ ನೆಲೆಯ ಒಳಗೆ ಮತ್ತು ಅದರ ಸುತ್ತಮುತ್ತ ಕರ್ನಾಟಕದ ಇತರ ಶ್ರೀಮಂತ ಗಾಯನ ಸಂಪ್ರದಾಯದ ಕಲೆಗಳು ನೆಲೆಸಿರುವುದರಿಂದ ತಂಬೂರಿಯವರ ಸಮಗ್ರ ಅಧ್ಯಯನಕ್ಕೆ ಈ ಪರಂಪರೆಯ ಇತರ ಗಾಯಕರ ನಡುವೆ ತಂಬೂರಿಯವರ ಸ್ಥಾನ ನಿರ್ಣಯ ಮಾಡುವ ಅಗತ್ಯವಿದೆ ಎನಿಸುತ್ತದೆ. ಅದರ ಸಲುವಾಗಿ ಈ ಅಧ್ಯಯನದಲ್ಲಿ ಈ ಇತರ ಕಲೆಗಳನ್ನು ಸಂಕ್ಷಿಪ್ತವಾಗಿ ಪರಿಚಯಿಸಲಾಗುತ್ತಿದೆ.

ವೃತ್ತಿಗಾಯಕರು ಎಂದರೆ ಯಾರು?

ಸಾಮಾನ್ಯವಾಗಿ ಸುದೀರ್ಘ ಕಾವ್ಯಗಳನ್ನು ಹಾಡುತ್ತಾ ತೆಮಾರಿನಿಂದ ತಲೆಮಾರಿಗೆ ಆ ಕಾವ್ಯಗಳನ್ನು ಒಯ್ಯುತ್ತಾ ತಮ್ಮದೇ ಆದ ಹಾಡುಗಾರಿಕೆಯ ಸಂಪ್ರದಾಯವನ್ನು, ಕಾವ್ಯ ಪರಂಪರೆಯನ್ನು ಹೊಂದಿರುವ ಗಾಯನ ಸಮೂಹವೇ ವೃತ್ತಿಗಾಯಕರು ಎಂದು ಜೀ.ಶಂ.ಪರಮಶಿವಯ್ಯನವರು ಅಭಿಪ್ರಾಯ ಪಡುತ್ತಾರೆ. ಇವರು ಸಂಪೂರ್ಣವಾಗಿ ತಮ್ಮ ಕಲೆಯನ್ನೇ ಅವಲಂಬಿಸಿ ಬದುಕುವವರು ಎಂಬುದು ಬಹಳಷ್ಟು ವಿದ್ವಾಂಸರ ಅಭಿಪ್ರಾಯ. ಆದರೂ ಪೂರ್ಣವಾಗಿ ಅಲ್ಲದಿದ್ದರೂ ಹೆಚ್ಚಿನ ಪ್ರಮಾಣದಲ್ಲಿ ತಮ್ಮ ಗಾಯನವನ್ನೇ ಅವಲಂಬಿಸಿ ಬದುಕುತ್ತಿರುವ ಗಾಯಕರನ್ನು ವೃತ್ತಿಗಾಯಕರು ಎಂದು ಕರೆಯಬಹುದು. ಈ ವೃತ್ತಿ ಗಾಯಕರನ್ನು ಧಾರ್ಮಿಕ ವೃತ್ತಿ ಗಾಯಕರು ಮತ್ತು ಲೌಕಿಕ ವೃತ್ತಿ ಗಾಯಕರೆಂದು ಎರಡು ಬಗೆಯಾಗಿ ವಿಂಗಡಿಸಿಕೊಂಡು ಬಂದಿದ್ದಾರೆ. ಬದಲಾದ ಸಾಮಾಜಿಕ ಪರಂಪರೆಯಲ್ಲಿ ಎಷ್ಟು ಕಲೆಗಳು ಇಂದು ಧಾರ್ಮಿಕ ಅಥವಾ ಲೌಕಿಕ ವೃತ್ತಿ ಕಲೆಯಾಗಿ ಉಳಿದುಕೊಂಡಿವೆ ಎಂಬುದನ್ನು ಪರಿಶೀಲಿಸಬೇಕಿದೆ. ಈ ದೃಷ್ಟಿಯಿಂದ ಈ ಹಿಂದೆ ನಡೆದಿರುವ ಅಧ್ಯಯನಗಳನ್ನು ಮರು ಅಧ್ಯಯನಕ್ಕೆ ಒಳಪಡಿಸುವ ಅಗತ್ಯವೂ ಇದೆ ಎನಿಸುತ್ತದೆ.

ಧಾರ್ಮಿಕ ವೃತ್ತಿಗಾಯಕರು ಎಂದರೆ ಯಾರು?

ಹಾಡುವ ಕಥೆಗಳು ಮತ್ತು ಸಂದರ್ಭ ಮುಖ್ಯವಾಗಿದ್ದು ಧಾರ್ಮಿಕವಾಗಿದ್ದು ಹಾಡುವ ಸಂಬಂಧ ಕಲಾವಿದ ದೀಕ್ಷೆ ಹೊಂದಿದವನಾಗಿರುತ್ತಾನೆ. ಅವನು ನಿರ್ದಿಷ್ಟ ದೈವವನ್ನು ಆರಾಧಿಸುತ್ತಾ ತಾನು ನಂಬಿರುವ ದೈವದ ಮಹಿಮೆಯನ್ನು ಹಾಡಿನಲ್ಲಿ ಸಾಮಾನ್ಯರಿಗೆ ಹೇಳುತ್ತಾ ಹೋಗುತ್ತಾರೆ. ಬಹುಪಾಲು ಗಾಯಕರು "ತಮ್ಮ ಆದಿದೈವದ ಲಾಂಛನಗಳನ್ನು ಧರಿಸಿ ಭಕ್ತರ ಮನೆಯಲ್ಲಿ ಭಿಕ್ಷೆ ಬೇಡಿ " ಜೀವಿಸುತ್ತಾರೆ. ತಮ್ಮ ಮೂಲ ಕ್ಷೇತ್ರಕ್ಕೆ ವಾರ್ಷಿಕ ಚಂದಾ ರೀತಿಯಲ್ಲಿ ಇಂತಿಷ್ಟು ದವಸ ಧಾನ್ಯ ಅರ್ಪಿಸಿದರೆ ಸಾಕು. ಇವರನ್ನು 'ದೇವರ ಮಕ್ಕಳು' ಎಂದರೂ ಆದೀತು. ಇವರು ತಮ್ಮ ವೃತ್ತಿಯನ್ನು ದೇವರ ಸೇವೆಯೆಂದೂ, ತಮ್ಮ ವಾದ್ಯವನ್ನೇ ದೇವರೆಂದೂ ನಂಬಿದ್ದಾರೆ. ತಮ್ಮ ವಾದ್ಯ ಮತ್ತು ಲಾಂಛನವನ್ನು ನಿತ್ಯವೂ ಪೂಜಿಸುತ್ತಾರೆ.

ಲೌಕಿಕ ವೃತ್ತಿ ಗಾಯಕರು ಯಾರು?

"ಯಾವ ಧರ್ಮದ ದೈವದ ವ್ಯಾಪ್ತಿಗೂ ಒಳಪಡದೆ ಸ್ವತಂತ್ರವಾಗಿ ತಾವು ಬಯಸಿದ ಕಥೆಗಳನ್ನು ಅಭ್ಯಸಿಸಿಕೊಂಡು ಬಂದ ಕಥೋಪಜೀವಿಗಳನ್ನು ಲೌಕಿಕ ವೃತ್ತಿ ಗಾಯಕರೆಂದು ಕರೆಯಬಹುದು. ಧಾರ್ಮಿಕ ಕತೆಗಾರರಿಗೂ ಇವರಿಗೂ ಇರುವ ಪ್ರಧಾನ ವ್ಯತ್ಯಾಸ ಕಲೆಗಾರಿಕೆಯಲ್ಲಿಲ್ಲದಿದ್ದರೂ ದೈವ ಸಂಬಂಧವಾದುದು". ಲೌಕಿಕ ವೃತ್ತಿ ಗಾಯಕರ ಗಾಯನ ಕಲೆಗೂ ಅವರ ಮನೆ ದೈವಕ್ಕೂ ಸಂಬಂಧವಿಲ್ಲ ಎನ್ನುವಂತಿಲ್ಲ. ಇವರೂ ತಮ್ಮ ಗಾಯನದ ಆದಿಯಲ್ಲಿ ಇಷ್ಟದೈವವನ್ನು ಸ್ಮರಿಸುತ್ತಾರೆ. ತಮ್ಮ ವಾದ್ಯವನ್ನು ದೈವವೆಂದೇ ಭಾವಿಸುತ್ತಾರೆ. ನಿತ್ಯವಲ್ಲದಿದ್ದರೂ ವಾರಕ್ಕೊಮ್ಮೆ ಅಥವಾ ಗಾಯನಕ್ಕೆ ಮೊದಲು ಪೂಜಿಸುತ್ತಾರೆ. ಗದ್ದುಗೆಯಲ್ಲದಿದ್ದರೂ ನಿರ್ದಿಷ್ಟ ಜಾಗದಲ್ಲಿ ಪೂಜ್ಯಭಾವದಿಂದ ಇಡುತ್ತಾರೆ. ಇವರು ಹಾಡುವ ಹಾಡುಗಳು ಅಥವಾ ಸಂದರ್ಭ ದೈವಸಂಬಂಧಿಯಾಗಿರಬೇಕೆಂಬ ನಿಯಮವಿಲ್ಲ ಅಥವಾ ಇಂತಹ ಸಂದರ್ಭಗಳಲ್ಲಿ ಹಾಡುವುದೇ ಇಲ್ಲ ಎಂದೂ ಹೇಳವಂತಿಲ್ಲ.

ತಂಬೂರಿಯವರು ಈ ಮೇಲಿನ ಯಾವ ಗುಂಪಿಗೆ ಸೇರುತ್ತಾರೆ ಎಂಬುದು ಬಹಳ ಕುತೂಹಲಕಾರಿಯಾದ ಸಂಗತಿ. ಅವರನ್ನು ಲೌಕಿಕ ವೃತ್ತಿಗಾಯಕರ ಪರಂಪರೆಗೆ ಸೇರಿಸಬೇಕೆಂಬುದು ನಿಸ್ಸಂದೇಹದ ಸಂಗತಿ. ಆದರೂ ಇವರು ಪೂರ್ಣವಾಗಿ ಗಾಯನವನ್ನೇ ವೃತ್ತಿಯಾಗಿ ಒಪ್ಪಿಕೊಂಡವರಲ್ಲ ಎಂಬ ಸಂಗತಿ ಸಂಶೋಧನೆಯ ಸಂದರ್ಭದಲ್ಲಿ ದೃಢಪಟ್ಟಿದೆ. ಸಂಶೋಧನೆಯ ಸಂದರ್ಭದಲ್ಲಿ ದೊರೆತ ಮಾಹಿತಯಂತೆ ಹಾಸನ ಜಿಲ್ಲೆ ಮತ್ತು ಇದಕ್ಕೆ ಹೊಂದಿಕೊಂಡಂತೆ ಕಂಡುಬಂದ ಕಲಾವಿದರ ಸಂಖ್ಯೆ 50ಕ್ಕೂ ಹೆಚ್ಚು. ಇವರಲ್ಲಿ ಬದುಕಿದ್ದವರು ಮತ್ತು ಹಾಡುಗಾರಿಕೆ ಆಸಕ್ತಿ ಹೊಂದಿದ್ದವರು ಐದು ತಂಡಗಳು ಮಾತ್ರ. ಆದರೆ ಎಲ್ಲ ಕಲಾವಿದರೂ ತಂಬೂರಿ ಗಾಯನದ ಜೊತೆ ಬೇರೆ ಬೇರೆ ಉಪಕಸುಬುಗಳನ್ನು ಹೊಂದಿದ್ದರು ಎಂಬುದು ತಿಳಿದು ಬಂದಿತ್ತು. ಆದ್ದರಿಂದಲೇ ತಂಬೂರಿ ಗಾಯಕರನ್ನು ಲೌಕಿಕ ವೃತ್ತಿಗಾಯಕರು ಎಂದು ಕರೆಯಲು ಸಾಧ್ಯವಾಗುತ್ತಿಲ್ಲ. ಅವರನ್ನು ಲೌಕಿಕ ಅರೆವೃತ್ತಿ ಗಾಯಕರು ಎಂದು ಕರೆಯಬಹುದು ಅನಿಸುತ್ತದೆ.

ಪ್ರಸ್ತುತ ಅಧ್ಯಯನದ ಪ್ರಧಾನ ಅಂಶವಿರುವುದು ಬೇರೆ. ಉಳಿದಂತೆ ಈಗ ಲಭ್ಯವಿರುವ ಈ ಪ್ರಕಾರದ ನಾಲ್ಕೈದು ತಂಡಗಳ ಕಲಾವಿದರು ಸುಮಾರು ಅರವತ್ತು-ಎಪ್ಪತ್ತು ವಯೋಮಾನ ದಾಟಿರುವವರು. ಈ ಹಿಂದೆ ಅಧ್ಯಯನದ ಸಂದರ್ಭದಲ್ಲಿ ಮಾಹಿತಿಗೆ ಸಿಕ್ಕಿದ ಅನೇಕ ಕಲಾವಿದರು ಇಂದು ಬದುಕಿಲ್ಲ. ಈ ಹಿಂದಿನ ವಿದ್ವಾಂಸರು ಸಂಗ್ರಹಿಸಿರುವ ಬಹುತೇಕ ಯಾವ ಕಲಾವಿದರೂ ಇಂದು ಬದುಕಿಲ್ಲ. ಕೆಲವರಿಗೆ ಹಾಡಲು ಆಸಕ್ತಿ ಇಲ್ಲ; ಮತ್ತೆ ಕೆಲವರನ್ನು ಮಕ್ಕಳು ಹಾಡಲು ಬಿಡುತ್ತಿಲ್ಲ. ಅದಲ್ಲದೆ ಈಗ ಬದುಕಿರುವ ಯಾವ ಕಲಾವಿದರ ಕಾವ್ಯಗಳನ್ನು ವಿದ್ವಾಂಸರು ಸಂಗ್ರಹಿಸಿಲ್ಲ. ಹಾಗಾಗಿ ಈ ಎಲ್ಲ ಕಲಾವಿದರನ್ನು ಸಂಪರ್ಕಿಸಿ ಹಾಡಿಸಿ ಕಾವ್ಯಗಳನ್ನು ಸಂಗ್ರಹಿಸುವ ಉತ್ಸಾಹದಿಂದ ತೆರಳಿದಾಗ ಮತ್ತೊಂದು ಸಂಗತಿ ದೃಢಪಟ್ಟಿತು. ಹಾಡುವ ಎಲ್ಲ ಗಾಯಕರು ಸಂಗ್ರಹ ಯೋಗ್ಯ ರೀತಿ ಹಾಡುವುದಿಲ್ಲ. ಅವರ ವಾದ್ಯಗಳ ಅಬ್ಬರದಲ್ಲಿ ಸಾಹಿತ್ಯ ಕೇಳುವುದೂ ಇಲ್ಲ. ಕೆಂಚಮ್ಮನ ಹೊಸಕೋಟೆ ಕಲಾವಿದೆ ಬಸಮ್ಮ ಬೇರೆಯವರಿಗಿಂತ ಭಿನ್ನವಾದ ಅಪರೂಪದ ಕತೆಗಳನ್ನು ಹಾಡುತ್ತಾರೆ. ದುಡ್ಡೇ ದೊಡ್ಡಪ್ಪ, ಹೊಸಕೋಟೆ ಕೆಂಚಮ್ಮ ಕತೆಗಳನ್ನು ಧೀರ್ಘವಾಗಿ ಹಾಡುತ್ತಾರೆ. ಆದರೆ ಸಂಗ್ರಹ ಯೋಗ್ಯವಾದ ರೀತಿಯಲ್ಲಿ ಇಲ್ಲ. ಈ ನಿಟ್ಟಿನಲ್ಲಿ ಹೊಳೇನರಸೀಪುರದ ಶ್ರೀ ತಂಬೂರಿ ಮರಿಯಪ್ಪ ಮತ್ತು ಅವರ ಪತ್ನಿ ಶ್ರೀಮತಿ ಹಾಲಮ್ಮ ಅವರು ಶ್ರಾವ್ಯವಾಗಿ ಹಾಡುತ್ತಾರೆ. ಅವರ ಕಾವ್ಯಗಳು ಸಂಗ್ರಹ ಯೋಗ್ಯವಾಗಿದ್ದವು. ಅದಕ್ಕಾಗಿ ಈ ಹಿಂದೆ ನಡೆಸಿದ ಅಧ್ಯಯನದ ಸಂದರ್ಭದಲ್ಲಿ ಅವರಿಂದ ಅನೇಕ ಕಾವ್ಯಗಳನ್ನು ಹಾಡಿಸಿ ಅಧ್ಯಯನಕ್ಕೆ ಒಳಪಡಿಸಲಾಗಿತ್ತು. ಅವರು ಸುಮಾರು ಎಪ್ಪತ್ತರ ವಯೋಮಾನದವರು. ವಯಸ್ಸಿಗಿಂತಲೂ ಹೆಚ್ಚಾಗಿ ದೇಹ ಕೃಶವಾಗಿತ್ತು. ಇವರು ಹಾಡುವ ಕಾವ್ಯಗಳನ್ನು ಸಂಗ್ರಹಿಸಿದರೆ ಬಹುತೇಕ ತಂಬೂರಿ ಕಾವ್ಯದ ಕೊನೆಯ ತಲೆಮಾರಿನ ಕಾವ್ಯಗಳನ್ನು ಸಂಗ್ರಹಿಸಿದಂತಾಗುತ್ತದೆ ಎಂಬ ನಿರ್ಧಾರದಿಂದ ಈ ಯೋಜನೆಯ ಮೂಲಕ ಆ ಕಾವ್ಯಗಳನ್ನು ಸಂಗ್ರಹಿಸುವ ಕಾರ್ಯ ಕೈಗೊಳ್ಳಲಾಗಿದೆ.

ಕನ್ನಡದ ನೆಲದ ಜನಪದ ಕಾವ್ಯ ಪರಂಪರೆಯ ದುರಾದೃಷ್ಟವೋ ಅಥವಾ ಈ ಅಧ್ಯಯನದ ಸಾರ್ಥಕ್ಯವೋ ಗೊತ್ತಿಲ್ಲ. ಈ ಯೋಜನೆಗಾಗಿ ಶ್ರೀ ತಂಬೂರಿ ಮರಿಯಪ್ಪನವರು ಹಾಡುವ ಹನ್ನೊಂದು ಕಾವ್ಯಗಳನ್ನು ಸಂಗ್ರಹಿಸಿದ ನಂತರ ಶ್ರೀಯುತರು ದೈವಾಧೀನರಾದರು. ಅವರಿಂದ ಅಣ್ಣ-ತಂಗಿ ಎಂಬ ಒಂದು ಕಾವ್ಯವನ್ನು ಸಂಗ್ರಹಿಸಲು ಸಾಧ್ಯವಾಗಲೇ ಇಲ್ಲ. ಉಳಿದಂತೆ ಎಲ್ಲ ಕಾವ್ಯಗಳನ್ನೂ ಸಂಗ್ರಹಿಸಲಾಗಿತ್ತು. ಕೇವಲ ಮೇಳಕ್ಕೆ ಮತ್ತು ಉಪಕಥೆಗಳಿಗೆ ಸೀಮಿತವಾಗಿದ್ದ ಅವರ ಪತ್ನಿ ಇನ್ನು ಮುಂದೆ ಈ ಪರಂಪರೆಯನ್ನು ಮುಂದುವರೆಸಲಾರರು. ಸಬನಹಳ್ಳಿಯ ಶ್ರೀ ಸಣ್ಣಕಾಳಯ್ಯ ಮತ್ತು ಕಬ್ಬಳಿಯ ಮಂಜಯ್ಯ ಆಗಾಗ ಹಾಡುತ್ತಾರೆಯಾದರೂ ಕಾವ್ಯಗಳು ಅಷ್ಟೊಂದು ಸುಸಂಬದ್ಧವಾಗಿಲ್ಲ. ಉಳಿದ ತಂಡದ ಗಾಯಕರು ಹಾಡುವುದನ್ನು ಸಂಪೂರ್ಣವಾಗಿ ನಿಲ್ಲಿಸಿದ್ದಾರೆ. ಹಾಗಾಗಿ ಅಕ್ಷರಶಃ ಇವು ತಂಬೂರಿ ಗಾಯಕರ ಕೊನೆಯ ತಲೆಮಾರಿನ ಕಾವ್ಯಗಳು. ಅಳಿವಿನ ಅಂಚಿನ ತಂಬೂರಿ ಕಾವ್ಯಗಳು!

Signature of
Principal Investigator

Principal

# FINAL REPORT OF THE
# WORK DONE ON THE
# MINOR RESEARCH PROJECT